ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 21-04-2017

# ಪತ್ರಿಕಾ ಆಮಂತ್ರಣ

## 1. "ಹವಮಾನ ಮಾಹಿತಿ ಸಂವಹನೆ – ಮಾಧ್ಯಮದ ಪಾತ್ರ " ಕಾರ್ಯಾಗಾರ

ಉದ್ಘಾಟನೆ:

ಟಿ.ಎಂ. ವಿಜಯ ಭಾಸ್ಕರ್,
ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು,
ಕರ್ನಾಟಕ ಸರ್ಕಾರ.

ಮುಖ್ಯ ಅತಿಥಿಗಳು:

ಗಂಗಾರಾಂ ಬಡೇರಿಯಾ,
ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಕರ್ನಾಟಕ ಸರ್ಕಾರ

ದಿನಾಂಕ: 22-04-2017 ಶನಿವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ.

ಸ್ಥಳ: ಕೆ.ಎಸ್.ಎನ್.ಡಿ.ಎಂ.ಸಿ. ಸಭಾಂಗಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ, ಬೆಂಗಳೂರು – 560 064.

ಸೂಚನೆ: ಈ ಕಾರ್ಯಕ್ರಮಕ್ಕೆ ಮಾಧ್ಯಮ ಪ್ರತಿನಿಧಿಗಳನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದ್ದು, ವಾಹನವು ಅಂದು ಬೆಳಿಗ್ಗೆ 9:00 ಗಂಟೆಗೆ ನಗರದ ಕಬ್ಬನ್ ಉದ್ಯಾನವನದಲ್ಲಿರುವ ಪ್ರೆಸ್‌ಕ್ಲಬ್ ಆವರಣದಿಂದ ನಿಗದಿತ ಸ್ಥಳದತ್ತ ತೆರಳಲಿದೆ.

**2. ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು 51 ನೇ ಘಟಿಕೋತ್ಸವ ಕುರಿತು ಪತ್ರಿಕಾಗೋಷ್ಠಿ:**

**ಡಾ. ಹೆಚ್. ಶಿವಣ್ಣ,**
**ಕುಲಪತಿಗಳು.**

**ದಿನಾಂಕ: 22–04–2017 ಶನಿವಾರ, ಸಮಯ: ಮಧ್ಯಾಹ್ನ 12.00 ಗಂಟೆಗೆ.**

**ಸ್ಥಳ: ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಕುಲಪತಿಗಳ ಕಚೇರಿ, (ಜಿ.ಕೆ.ವಿ.ಕೆ.) ಬೆಂಗಳೂರು.**

**ಸೂಚನೆ: ಈ ಕಾರ್ಯಕ್ರಮಕ್ಕೆ ಮಾಧ್ಯಮ ಪ್ರತಿನಿಧಿಗಳನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದ್ದು, ವಾಹನವು ಅಂದು ಬೆಳಿಗ್ಗೆ 11–15 ಗಂಟೆಗೆ ನಗರದ ಕಬ್ಬನ್ ಉದ್ಯಾನವನದಲ್ಲಿರುವ ಪ್ರೆಸ್‌ಕ್ಲಬ್ ಆವರಣದಿಂದ ನಿಗದಿತ ಸ್ಥಳದತ್ತ ತೆರಳಲಿದೆ.**

**ಸಂಪರ್ಕ : ಡಾ. ಕೆ. ಶಿವರಾಮು,**
**ಮೊಬೈಲ್ ಸಂಖ್ಯೆ : 9972035456.**

**3. ಬೆಳ್ಳಿ ಸಿನಿಮಾ – ಬೆಳ್ಳಿಮಾತು ಕಾರ್ಯಕ್ರಮದಲ್ಲಿ ಬೆಳ್ಳಿ ಸಿನಿಮಾ “ಫಸ್ಟ್ ರ್‍ಯಾಂಕ್ ರಾಜು”**

**ಬೆಳ್ಳಿ ಮಾತು**

ನರೇಶ್ ಕುಮಾರ್
ನಿರ್ದೇಶಕರು

**ಅತಿಥಿಗಳು**

ಮಂಜುನಾಥ್ ವಿ, ನಿರ್ಮಾಪಕರು

ಗಿರಿ ಮಹೇಶ್, ಸಂಕಲನಕಾರರು.

**ದಿನಾಂಕ: 22–04–2017 ಶನಿವಾರ, ಸಮಯ: ಸಂಜೆ 4.00 ಗಂಟೆಗೆ.**
**ಸ್ಥಳ: ಚಾಮುಂಡೇಶ್ವರಿ ಸ್ಟುಡಿಯೋ, ಮಿಲ್ಲರ್ಸ್ ರಸ್ತೆ, ಬೆಂಗಳೂರು.**

4. **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
**ಮನೆಯಂಗಳದಲ್ಲಿ ಮಾತುಕತೆ – 186**

**ಅತಿಥಿ:**
ನಾಗೇಶ್ ಹೆಗಡೆ, ಪರಿಸರ ವಿಜ್ಞಾನ ಲೇಖಕರು

**ದಿನಾಂಕ: 22–04–2017 ಶನಿವಾರ, ಸಮಯ: ಸಂಜೆ 4.00 ಗಂಟೆಗೆ.**
**ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.**

**ಪತ್ರಿಕಾ ಪ್ರಕಟಣೆ**

# ನಗರ ಪ್ರದೇಶದ ಬಡವರ ಆರೋಗ್ಯದ ಬಗ್ಗೆ ಕಾಳಜಿವಹಿಸಲು ಸಚಿವರ ಸೂಚನೆ

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ನಗರಗಳ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಇಂತಹ ಸಮಯದಲ್ಲಿ ನಗರ ಬಡವರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಉತ್ತಮವಾಗಿ ಕಾರ್ಯನಿರ್ವಹಿಸಿ ಯಶಸ್ಸು ಪಡೆಯಲಿ ಎಂದು ನಗರಾಭಿವೃದ್ಧಿ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್ ಅವರು ಶುಭ ಕೋರಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ಏಪ್ರಿಲ್ 21 ರಂದು ನಗರದ ಶಾಂಗ್ರಿ–ಲಾ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಕುರಿತು ಸ್ಥಳೀಯ ನಗರ ಸಂಸ್ಥೆಗಳ ಪ್ರತಿನಿಧಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು

ಮಾತನಾಡಿ ನಗರ ವಾಸಿಗಳ ಆರೋಗ್ಯ ಯೋಜನೆಯಡಿ 131 ಕೋಟಿ ರೂ.ಗಳಲ್ಲಿ ಈಗಾಗಲೇ ಶೇ 73 ರಷ್ಟು ಖರ್ಚಾಗಿದ್ದು, ಪೂರ್ಣ ಹಣವನ್ನು ಇನ್ನೂ ಹೆಚ್ಚಿನ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವಂತೆ ಅಧಿಕಾರಿಗಳಿಗೆ ಕರೆ ನೀಡಿದರು.

ನಮ್ಮ ದೇಶದಲ್ಲಿ ಔಷಧಿ ಕಂಪನಿಗಳು ತಮ್ಮ ಔಷಧಗಳ ಪ್ರಯೋಗವನ್ನು ಬಡವರ ಮೇಲೆ ಪ್ರಯೋಗ ಮಾಡುತ್ತಿರುವುದು ದುರದೃಷ್ಟಕರ, ಈ ರೀತಿಯ ಪ್ರಯೋಗಗಳನ್ನು ತಡೆಗಟ್ಟುವಲ್ಲಿ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಕಠಿಣ ಕ್ರಮ ಕೈಗೊಳ್ಳುತ್ತಿದೆ. ಬಡವರಿಗೆ ಕಡಿಮೆ ಹಣದಲ್ಲಿ ಔಷಧಿಗಳು ದೊರಕುವಂತಾಗಲು ಸರ್ಕಾರ ಜನರಿಕ್ ಔಷಧಾಲಯಗಳನ್ನು ತೆರೆಯುತ್ತಿರುವುದು ಶ್ಲಾಘನೀಯ ಎಂದು ಅವರು ಹೇಳಿದರು.

**ಜ್ವರ ಸಮೀಕ್ಷೆ ಮತ್ತು ಮಲೇರಿಯಾ ಕಂಡುಬಂದ ಪ್ರಕರಣಗಳ ಅನುಪಾಲನೆಯನ್ನು ಸತತವಾಗಿ ಮುಂದುವರೆಸಲು ಅನುಕೂಲವಾಗುವಂತೆ, ಒಂದು ಹೊಸ ಗಣಕ ತಂತ್ರಾಂಶವನ್ನು ಅಭಿವೃದ್ಧಿಗೊಳಿಸಿದ್ದು ಈಗಾಗಲೇ ಪ್ರಾಯೋಗಿಕವಾಗಿ ಮಲೇರಿಯಾ ಸಮಸ್ಯಾತ್ಮಕ ಮಂಗಳೂರು ನಗರದಲ್ಲಿ ಬಳಸಲಾಗುತ್ತಿರುವ ಈ ತಂತ್ರಾಂಶವನ್ನು ಇತರೆ ಪ್ರದೇಶಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿದೆ. ರಾಜ್ಯದ ಮಲೇರಿಯಾ ನಿವಾರಣಾ ನೀತಿ ಮತ್ತು ಮಾರ್ಗದರ್ಶಿ ಪುಸ್ತಕದ ಹಾಗೂ ಮೇಲ್ವಿಚಾರಣಾ ಗಣಕತಂತ್ರಾಂಶವನ್ನು ಸಚಿವರು ಬಿಡುಗಡೆ ಮಾಡಿದರು.**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ ಜಂಟಿ ಕಾರ್ಯದರ್ಶಿ ಡಾ. ಕೆ. ರಾಜೇಶ್ವರ ರಾವ್ ಮಾತನಾಡಿ ದೇಶದಲ್ಲಿ ಆರೋಗ್ಯ ಯೋಜನೆಗಳ ಅನುಷ್ಠಾನದಲ್ಲಿ ಕರ್ನಾಟಕ ಉತ್ತಮ ಮಾದರಿಯಾಗಿದೆ. ದೇಶದಾದ್ಯಂತ ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ಗುರಿ 2030 ರೊಳಗಾಗಿ ಮಲೇರಿಯಾವನ್ನು ನಿರ್ಮೂಲನೆ ಮಾಡುವ ಸಂಕಲ್ಪ ಹೊಂದಿದೆ.**

**ರಾಜ್ಯ ಸರ್ಕಾರಗಳು ಈ ಅಭಿಯಾನದಲ್ಲಿ ಜಂಟಿಯಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಉತ್ತಮ ಹಾಗೂ ನಿಗದಿತ ವರ್ಷಕ್ಕಿಂತಲೂ ಮೊದಲೇ ಯಶಸ್ಸು ಕಾಣಲಿದ್ದೇವೆ ಎಂಬ ನಂಬಿಕೆ ತಮಗಿದ್ದು ಈ ಅಭಿಯಾನದ ನಗರ ಸಂಸ್ಥೆಗಳ ಪ್ರತಿನಿಧಿಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ತಿಳಿಸಿದರು.**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ಅವರು ಮಾತನಾಡಿ 2017 ನ್ನು ಕರ್ನಾಟಕದಲ್ಲಿ ನಗರ ಆರೋಗ್ಯ ವರ್ಷವಾಗಿ ಆಚರಿಸಲಾಗುವುದು.**

**ಇಂದಿನ ಈ ಕಾರ್ಯಾಗಾರದಲ್ಲಿ ಪ್ರತಿನಿಧಿಗಳಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ದೇಶ – ವಿದೇಶಗಳಿಂದ ಅನೇಕ ಪ್ರತಿಭಾನ್ವಿತರು ತಮ್ಮ ಜ್ಞಾನವನ್ನು ಹಂಚಿಕೊಳ್ಳಲಿದ್ದಾರೆ. ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಈ ಅಭಿಯಾನದ ಪ್ರಕಾರ ಗುರಿ ನೀಡಲಾಗಿರುವ ಅವಧಿಗೂ 5 ವರ್ಷಗಳಿಗೆ ಮುಂಚೆಯೇ ಕರ್ನಾಟಕ ಮಲೇರಿಯಾ ಮುಕ್ತ ರಾಜ್ಯವನ್ನಾಗಿಸಲು ಶ್ರಮಿಸಲಾಗುವುದು ಎಂದು ಹೇಳಿದರು.**

**ಸಮಾರಂಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಉನ್ನತಾಧಿಕಾರಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.**

**ಎಸ್‌ಎಂ:ಜೆಡಿ:ಜಿಪಿಆರ್.**

# <u>ನೂತನ ಶಾಸಕರಿಂದ ಪ್ರಮಾಣ ವಚನ ಸ್ವೀಕಾರ</u>

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನಸಭೆಯ ಉಪ ಚುನಾವಣೆಯಲ್ಲಿ ನೂತನವಾಗಿ ಚುನಾಯಿತರಾಗಿರುವ ನಂಜನಗೂಡು ವಿಧಾನಸಭಾ ಕ್ಷೇತ್ರದ ಕಳಲೆ ಕೇಶವಮೂರ್ತಿ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಡಾ. ಎಂ. ಸಿ. ಮೋಹನಕುಮಾರಿ ಉರುಫ್ ಗೀತಾ ಮಹಾದೇವ ಪ್ರಸಾದ್ ಅವರಿಗೆ ವಿಧಾನಸಭಾಧ್ಯಕ್ಷರಾದ ಕೆ. ಬಿ. ಕೋಳಿವಾಡ ಅವರು ಇಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾದ ಸಮಾರಂಭದಲ್ಲಿ ಪ್ರಮಾಣ ವಚನ ಬೋಧಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪಸ್ಥಿತರಿದ್ದರು

**ಎಸ್‌ಎಂ/ಕೆಎನ್‌ನ್/ಜಿಪಿಆರ್.**

## ಏಪ್ರಿಲ್ 24ರಿಂದ ನಗರದಲ್ಲಿ ರಾಷ್ಟ್ರಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ ಖಾದಿ ಉತ್ಸವ –2017

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ರಾಷ್ಟ್ರಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಏಪ್ರಿಲ್ 24, 2017ರಿಂದ ಮೇ 23 ರವರೆಗೆ ನಡೆಯಲಿದ್ದು, ಏಪ್ರಿಲ್ 24ರಂದು ಸಂಜೆ 4 ಗಂಟೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ವಸ್ತು ಪ್ರದರ್ಶನ ಉದ್ಘಾಟಿಸಲಿದ್ದಾರೆ ಎಂದು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಯಲುವನಹಳ್ಳಿ ಎನ್. ರಮೇಶ್ ಅವರು ತಿಳಿಸಿದರು.

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನ್ನಾಡಿದ ಅವರು, ಈ ವಸ್ತು ಪ್ರದರ್ಶನದಲ್ಲಿ ಅರಳೆ, ರೇಷ್ಮೆ, ಉಣ್ಣೆ ಖಾದಿ ಬಟ್ಟೆಗಳು, ಮರದ ಕೆತ್ತನೆಯ ವಸ್ತುಗಳು, ಪೀಠೋಪಕರಣಗಳು, ನೈಸರ್ಗಿಕ ಸೆಣಬಿನ ಉತ್ಪನ್ನಗಳು, ಪಾದರಕ್ಷೆಗಳು, ಕುಂಬಾರಿಕೆಯ ವಸ್ತುಗಳು, ಕೈಚೀಲಗಳು, ಎಲೆಕ್ಟ್ರಾನಿಕ್ಸ್ ವಸ್ತುಗಳು, ಶುದ್ಧ ಜೇನು ತುಪ್ಪ, ಗೋಡಂಬಿ , ಔಷಧೀಯ ಉತ್ಪನ್ನಗಳು ದೊರೆಯಲಿವೆ ಎಂದು ವಿವರಿಸಿದರು.

ಖಾದಿ ಮಂಡಳಿ ಮತ್ತು ಖಾದಿ ಆಯೋಗದಿಂದ ಧನ ಸಹಾಯ ಪಡೆದ ಕಸುಬುದಾರರು ಸಂಘ ಸಂಸ್ಥೆಗಳು ಸೇರಿದಂತೆ ದೇಶದ 15 ರಾಜ್ಯಗಳ ಖಾದಿ ಉತ್ಪನ್ನಗಳು ಈ ಪ್ರದರ್ಶನದಲ್ಲಿ ಪ್ರದರ್ಶನಗೊಳ್ಳಲಿದ್ದು, ಒಟ್ಟು 330 ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದ ಅವರು, ಈಗಾಗಲೇ 186 ಘಟಕಗಳು ಆನ್‌ಲೈನ್‌ನಲ್ಲಿ ನೋಂದಣಿಗೊಂಡಿವೆ ಎಂದರು.

ಈ ಪ್ರದರ್ಶನದಲ್ಲಿ 2014ರಲ್ಲಿ 1,10,000 ಜನರು, 2015ರಲ್ಲಿ 1,20,000, 2016ರಲ್ಲಿ 1,25,000 ಜನರು ಭೇಟಿ ನೀಡಿದ್ದು, ಕ್ರಮವಾಗಿ 17.00 ಕೋಟಿ, 21.00 ಕೋಟಿ, 25.00 ಕೋಟಿ ವಹಿವಾಟು ನಡೆದಿದ್ದು, ಈ ಬಾರಿ ಖಾದಿ ಉತ್ಸವ–2017ರಲ್ಲಿ ಸುಮಾರು 2.50 ಲಕ್ಷ ಜನರು ಭೇಟಿ ನೀಡುವ ನಿರೀಕ್ಷೆಯಿದೆ ಎಂದರು.

ನೂಲುವುದು, ನೇಯುವುದು, ಕುಂಬಾರಿಕೆ, ಬಿದಿರು, ಬೆತ್ತದ ಸಾಮಾಗ್ರಿಗಳು ಇತ್ಯಾದಿಗಳ ಕುರಿತಂತೆ ಮಂಡಳಿ ಮತ್ತು ಆಯೋಗದಿಂದ ಧನ ಸಹಾಯ ಪಡೆದ ಕಸುಬುದಾರರು ಮತ್ತು ಸಂಘ ಸಂಸ್ಥೆಗಳಿಂದ ಅವರು ಉತ್ಪಾದಿಸುವ ಉತ್ಪನ್ನಗಳ ಪ್ರಾತ್ಯಕ್ಷಿಕೆಯನ್ನು ಸಹ ಏರ್ಪಡಿಲಾಗಿದೆ ಎಂದು ರಮೇಶ್ ಅವರು ತಿಳಿಸಿದರು.

**ಖಾದಿ ಮಂಡಳಿ ಯೋಜನೆಗಳು:** ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಖಾದಿ ಪ್ಲಾಜಾ ನಿರ್ಮಿಸಲು ಉದ್ದೇಶಿಸಲಾಗಿದ್ದು, ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಈ ಯೋಜನೆ 10 ಕೋಟಿ ರೂ ವೆಚ್ಚದಲ್ಲಿ ಸಾಕಾರಗೊಳ್ಳಲಿದೆ.

ಮಂಡಳಿಯ ಬೆಂಗಳೂರು ಕೇಂದ್ರ ಕಚೇರಿ ಆವರಣದಲ್ಲಿ ಲಭ್ಯವಿರುವ ಸ್ಥಳದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆಗಾಗಿ ಅರ್ಬನ್ ಹಾತ್ ಯೋಜನೆಯಡಿ 2017-18 ನೇ ಸಾಲಿನಲ್ಲಿ 1 ಕೋಟಿ ರೂ. ಬಿಡುಗಡೆಗೆ ಬೇಡಿಕೆ ಸಲ್ಲಿಸಲಾಗಿದೆ.

ಖಾದಿ ಬಟ್ಟೆಗಳಿಗೆ ಅವಶ್ಯವಿರುವ ಬ್ಲಿಚಿಂಗ್, ಡೈಯಿಂಗ್, ಪ್ರಿಂಟಿಂಗ್ ಕೆಲಸ ಸದ್ಯ ಹೊರ ರಾಜ್ಯಗಳಲ್ಲಿ ನಡೆಯುತ್ತಿದ್ದು, ಈ ತೊಂದರೆ ತಪ್ಪಿಸಲು ರಾಜ್ಯದಲ್ಲಿಯೇ 2-3 ಕಡೆ ಈ ಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕುಂಬಾರಿಕೆ ಜನಾಂಗದ ನಿರೋದ್ಯೋಗಿಗಳನ್ನು ಗುರುತಿಸಿ ಅವರಿಗೆ ತರಬೇತಿಯನ್ನು ನೀಡಲು ಉತ್ತರ ಕನ್ನಡ ಜಿಲ್ಲೆ ಜೋಯಿಡಾ ತಾಲ್ಲೂಕು ಅಸು ಗ್ರಾಮದಲ್ಲಿ ಯೊಜನೆಯನ್ನು ಸ್ಥಾಪಿಸಲು ಉದ್ದೇಶಿಲಾಗಿದ್ದು ರಾಜ್ಯ ಸರ್ಕಾರದಿಂದ 100.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ ಎಂದು ಅವರು ತಿಳಿಸಿದರು.

ಎಸ್‌ಎಂ/ಮಮತ

## ರಾಜ್ಯ ಚಲನಚಿತ್ರ ಪ್ರಶಸ್ತಿ ಹಿನ್ನೋಟ

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭಗಳು ನಡೆದ ಸ್ಥಳಗಳ ಹಿನ್ನೋಟ ಕುತೂಹಲಕಾರಿ.

ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭಗಳು ಪ್ರಾರಂಭದಲ್ಲಿ ನಡೆದಿದ್ದು ರಾಜಧಾನಿ ಬೆಂಗಳೂರಿನಲ್ಲಿ. ಹೆಸರಾಂತ ಸಾಂಸ್ಕೃತಿಕ ಸಭಾಂಗಣ ರವೀದ್ರ ಕಲಾಕ್ಷೇತ್ರ, ಪಾರಂಪರಿಕ ಕಟ್ಟಡ ಪುಟ್ಟಣ್ಣಚೆಟ್ಟಿ ಪುರಭವನ, ಲಾಲ್‌ಬಾಗ್ ಗಾಜಿನ ಮನೆ, ಜ್ಞಾನಜ್ಯೋತಿ ಸಭಾಂಗಣ, ಅಂಬೇಡ್ಕರ್ ಭವನ, ವಿಶ್ವವಿದ್ಯಾನಿಲಯಗಳ ಸಭಾಂಗಣಗಳು ಪ್ರಶಸ್ತಿ ಪ್ರದಾನಕ್ಕೆ ಸಾಕ್ಷಿಯಾದ ಸ್ಥಳಗಳು.

**ಆಯ್ಕೆ ಸಮಿತಿ:**

ಮೊಟ್ಟಮೊದಲ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶ್ರೀ ಮಳಿಮಠ್ ಅವರು ಅಧ್ಯಕ್ಷರಾಗಿದ್ದರು. ಪ್ರಸಿದ್ಧ ಸಾಹಿತಿ ಚಿತ್ರ

ನಿರ್ದೇಶಕ ಕೆ.ಶಿವರಾಮ ಕಾರಂತ, ಖ್ಯಾತ ಅಭಿನೇತ್ರಿ ದೇವಿಕಾ ರಾಣಿ ರೋರಿಚ್, ವಾರ್ತಾ ಇಲಾಖೆ ನಿರ್ದೇಶಕ ಎಂ. ಡಿ. ಮರಿಪುಟ್ಟಣ್ಣ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

# ರಾಜ್ಯ ಕೇಂದ್ರ ಗ್ರಂಥಾಲಯದ ನವೀಕೃತ ಕಟ್ಟಡದ ಉದ್ಘಾಟನಾ ಸಮಾರಂಭ

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ವಿಶ್ವ ಪುಸ್ತಕ ಮತ್ತು ಕೃತಿಸ್ವಾಮ್ಯ ದಿನಾಚರಣೆ ಹಾಗೂ ರಾಜ್ಯ ಕೇಂದ್ರ ಗ್ರಂಥಾಲಯದ ನವೀಕೃತ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಏಪ್ರಿಲ್ 23 ರಂದು **ಭಾನುವಾರ ಬೆಳಿಗ್ಗೆ 11.00 ಗಂಟೆಗೆ ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.**

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಔಕಾಫ್ ಸಚಿವ ತನ್ವೀರ್ ಸೇಠ್ ಅವರು ವಿಶ್ವ ಪುಸ್ತಕ ಮತ್ತು ಕೃತಿ ಸ್ವಾಮ್ಯ ದಿನಾಚರಣೆ ಹಾಗೂ ರಾಜ್ಯ ಕೇಂದ್ರ ಗ್ರಂಥಾಲಯದ ನವೀಕೃತ ಕಟ್ಟಡ ಹಾಗೂ 'ಶತನಮಾನದ ಬೆಳಕು' ಕೃತಿಯನ್ನು ಬಿಡುಗಡೆ ಮಾಡಲಿದ್ದಾರೆ.**

**ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವ ಕೆ.ಜೆ. ಜಾರ್ಜ್ ಅವರು ಅಂತರ್ಜಾಲ ಕೇಂದ್ರ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.**

**ವಸತಿ ಸಚಿವ ಎಂ. ಕೃಷ್ಣಪ್ಪ ಅವರು ಇ–ಗ್ರಂಥಸೂಚಿ ಸಿ.ಡಿ. ಬಿಡುಗಡೆ ಮಾಡುವರು. ಕೃಷಿ ಸಚಿವ ಕೃಷ್ಣಬೈರೇಗೌಡ ಅವರು ಶತಮಾನೋತ್ಸವ ಗೀತೆಯ ಸಿ.ಡಿ. ಬಿಡುಗಡೆಯನ್ನು ನೆರವೇರಿಸಲಿದ್ದಾರೆ.**

**ಸಮಾರಂಭ ಅಧ್ಯಕ್ಷತೆಯನ್ನು ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ವಹಿಸಲಿದ್ದಾರೆ.**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ ಅವರು ಜ್ಞಾನದೇಗುಲ '11' ಸಾಕ್ಷ್ಯಚಿತ್ರದ ಸಿ.ಡಿ. ಬಿಡುಗಡೆ ಮಾಡಲಿದ್ದಾರೆ.**

**ಮೀನುಗಾರಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು, ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸದಸ್ಯರು ಆದ ಪ್ರಮೋದ್ ಮಧ್ವರಾಜ್ ಅವರು ಶತಮಾನೋತ್ಸವ ಸ್ಮರಣಾರ್ಥ ಅಂಚೆ ಚೀಟಿ ಮತ್ತು ವಿಶೇಷ ಲಕೋಟೆ ಬಿಡುಗಡೆ ಮಾಡಲಿದ್ದಾರೆ.**

**ಸಮಾರಂಭದಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಸದಸ್ಯ ಪಿ.ಸಿ. ಮೋಹನ್ ಅವರು ಸೇರಿದಂತೆ ರಾಜ್ಯಸಭಾ ಸದಸ್ಯರು ವಿಧಾನ ಪರಿಷತ್ ಸದಸ್ಯರು, ಶಾಸಕರು, ಅನೇಕ ಗಣ್ಯವ್ಯಕ್ತಿಗಳು, ಹಿರಿಯ ಅಧಿಕಾರಿಗಳು ಉಪಸ್ಥಿತರಿರುವರು.**

**ಎಸ್‌ಎಂ:ಜೆಡಿ:ಜಿಪಿಆರ್.**

# <u>"ಬಾಲಶ್ರೀ" ಪ್ರಶಸ್ತಿಗಾಗಿ ಆಯ್ಕೆ ಶಿಬಿರ</u>

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ಬೆಂಗಳೂರು ಬಾಲ ಭವನವು, ರಾಷ್ಟ್ರೀಯ ಬಾಲ ಭವನ, ನವದೆಹಲಿಯ ವತಿಯಿಂದ ಪ್ರದಾನ ಮಾಡುವ "ಬಾಲಶ್ರೀ" ಪ್ರಶಸ್ತಿಗಾಗಿ ನಡೆಸುವ ರಾಜ್ಯ ಮಟ್ಟದ ಆಯ್ಕೆ ಶಿಬಿರದಲ್ಲಿ ಭಾಗವಹಿಸಲು ಅರ್ಹ ಮಕ್ಕಳ ನಾಮನಿರ್ದೇಶನ ಮಾಡುತ್ತಿದೆ.

ಅದರಂತೆ 2016 ನೇ ಸಾಲಿನ ಬಾಲಶ್ರೀ ಪ್ರಶಸ್ತಿಗಾಗಿ ಪ್ರತಿಭೆ ಹೊಂದಿರುವ 10-16 ವರ್ಷದ ಮಕ್ಕಳಿಗೆ (01-04-2016 ಕ್ಕೆ 10 ವರ್ಷ ತುಂಬಿದ್ದು, 16 ವರ್ಷ ಮೀರಿರಬಾರದು) ದಿನಾಂಕ: 30.04-2017 ರಂದು ಸ್ಥಳೀಯ ಮಟ್ಟದ ಆಯ್ಕೆ ಶಿಬಿರವನ್ನು ಕೇಂದ್ರ ಭಾಲ ಭವನ, ಕಬ್ಬನ್ ಉದ್ಯಾನವನದಲ್ಲಿ ಹಮ್ಮಿಕೊಂಡಿದೆ.

ಸೃಜನಾತ್ಮಕ ಪ್ರದರ್ಶನ ಕಲೆಗಳಾದ ತಾಳ ವಾದ್ಯ/ವಾದ್ಯ ಸಂಗೀತ, ಸಂಗೀತ (ವೊಕಲ್), ನೃತ್ಯ, ಥಿಯೇಟರ್ ಮತ್ತು ಪೊಪೆಟ್ರಿ – ಬೆಳಿಗ್ಗೆ 10.00 ಗಂಟೆಗೆ.

ಸೃಜನಾತ್ಮಕ ಕಲೆಗಳಾದ ಚಿತ್ರಕಲೆ, ಕರಕುಶಲೆ, ಶಿಲ್ಪಕಲೆ ಹಾಗೂ ವಿಷುಯಲ್ ಆರ್ಟ್ಸ್ (ಡಿಸೈನಿಂಗ್ ಗ್ರಾಫಿಕ್ಸ್ ಮತ್ತು ಡಿಜಿಟಲ್ ಆರ್ಟ್) ಬೆಳಿಗ್ಗೆ 11.00 ಗಂಟೆಗೆ.

ಸೃಜನಾತ್ಮಕ ಬರವಣಿಗೆಗಳಾದ ಕಥೆ, ಕವನ, ಗದ್ಯ ಹಾಗೂ ಸಂಭಾಷಣೆ ಮತ್ತು ನಾಟಕ ರಚನೆ – ಬೆಳಿಗ್ಗೆ 11.30 ಗಂಟೆ

ವಿಜ್ಞಾನದಲ್ಲಿ ನೂತನ ಅವಿಷ್ಕಾರ – ಮಾದರಿಗಳಾದ ವಿಜ್ಞಾನ ಮಾದರಿ ತಯಾರಿಕೆ, ಸೈನ್ಸ್ ಪ್ರಾಜೆಕ್ಟ್, ಸೈನ್ಟಿಫಿಕ್ ಪ್ರಾಬ್ಲಂ ಸಾಲ್ವಿಂಗ್ ಹಾಗೂ ವಿಜ್ಞಾನದಲ್ಲಿ ನೂತನ ಆವಿಷ್ಕಾರ (ಸೈನ್ಟಿಪಿಕ್ ಇನೋವೇಷನ್) – ಮಧ್ಯಾಹ್ನ 12.00 ಗಂಟೆಗೆ.

ವಿಕಲಚೇತನ ಮಕ್ಕಳಿಗೂ ಸದರಿ ಶಿಬಿರದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಭಾಗವಹಿಸಲಿಚ್ಚಿಸುವ ಮಕ್ಕಳು ಏಪ್ರಿಲ್ 29 ರೊಳಗೆ ನೋಂದಣಿ ಮಾಡಲು ಕೋರಿದೆ.

ಹೆಚ್ಚಿನ ವಿವರಗಳಿಗೆ ಕಾರ್ಯದರ್ಶಿಗಳ ಕಚೇರಿ, ಬಾಲ ಭವನ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080 – 22864189, 22861423 ಮೂಲಕ ಸಂಪರ್ಕಿಸಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## 14 ವಾರಗಳ ಬೇಕರಿ ತಂತ್ರಜ್ಞಾನ ತರಬೇತಿ

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ಹದಿನಾಲ್ಕು ವಾರದ ಬೇಕರಿ ಟೆಕ್ನಾಲಜಿ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಯು ಕನಿಷ್ಟ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿ) ಪಾಸಾಗಿರಬೇಕು.

ನಿಗಧಿತ ಅರ್ಜಿ ಪಾರಂಗಳನ್ನು ರೂಪಾಯಿ 10–00 (ಹತ್ತು) ಸಂದಾಯಿಸಿ, ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು–560024, ಇಲ್ಲಿಂದ ಪಡೆದುಕೊಳ್ಳಬಹುದು.

ಅರ್ಜಿಯನ್ನು ಪಡೆಯಲು ಹಾಗೂ ಭರ್ತಿಮಾಡಿದ ಅರ್ಜಿಯನ್ನು ಹಿಂದಿರುಗಿಸಲು ಕೊನೆಯ ದಿನಾಂಕ **28.04.2017 ರಂದು 4.00 ಘಂಟೆಯ** ಒಳಗೆ, ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು–560 024, ಈ ವಿಳಾಸಕ್ಕೆ ತಲುಪಿಸಬೇಕು.

ಹೆಚ್ಚಿನ ವಿವರಗಳಿಗೆ **ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿವಿಶ್ವವಿದ್ಯಾನಿಲಯ, ಹೆಬ್ಬಾಳ ಇವರನ್ನು ಖುದ್ದಾಗಿ ಅಥವಾ ದೂರವಾಣಿಯ ಮೂಲಕ ಸಂಪರ್ಕಿಸಿ 080–23513370**

ಎಸ್‌ಎಂ:ಜೆಡಿ:ಜಿಪಿಆರ್.

# 14 weeks certificate course in

# Bakery Technology.

**Bengaluru, April 21 (Karnataka Information)**

Bakery Training Unit, University of Agricultural Sciences, Hebbal, Bangalore – 560 024 has invited application for **14 weeks certificate course in Bakery Technology.** Minimum qualification required is pass in SSLC/10$^{th}$ Standard. The applications may be obtained from Bakery Training Unit by paying a fee of Rs.10/- and the completed application may be sent to Co-ordinator, Bakery Training Unit, UAS, Hebbal, Bangalore – 560 024. The last date to issue and receive application is on or before **28.04.2017 at 4.00 pm.** Interested candidates can contact **Co-ordinator, Bakery Training Unit, UAS, Hebbal, Bangalore – 560 024, personally or through phone 080-23513370**

Sm/jd/gpr

# ಬೆಳ್ಳಿ ಸಿನಿಮಾ – ಬೆಳ್ಳಿಮಾತು ಕಾರ್ಯಕ್ರಮದಲ್ಲಿ

# "ಫಸ್ಟ್ ರ್‍ಯಾಂಕ್ ರಾಜು"

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿ ಪ್ರತಿ ಶನಿವಾರ ಹಮ್ಮಿಕೊಳ್ಳುವ ಬೆಳ್ಳಿ ಸಿನಿಮಾ – ಬೆಳ್ಳಿ ಮಾತು ಕಾರ್ಯಕ್ರಮದಲ್ಲಿ ಏಪ್ರಿಲ್ 22 ರಂದು ಸಂಜೆ 4.00 ಗಂಟೆಗೆ ನಗರದ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ "ಫಸ್ಟ್ ರ್‍ಯಾಂಕ್ ರಾಜು" ಚಿತ್ರ ಪ್ರದರ್ಶನವನ್ನು ಹಮ್ಮಿಕೊಂಡಿದೆ.

ಈ ಚಿತ್ರ ನಿರ್ದೇಶಕರಾದ ನರೇಶ್ ಕುಮಾರ್ ಅವರಿಂದ ಬೆಳ್ಳಿಮಾತು ಹಾಗೂ ನಿರ್ಮಾಪಕ ಮಂಜುನಾಥ್ ವಿ ಹಾಗೂ ಸಂಕಲನಕಾರರಾದ ಗಿರಿ ಮಹೇಶ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿರುವರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್. ವಿ. ರಾಜೇಂದ್ರ ಸಿಂಗ್ ಬಾಬು ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಎಸ್‍ಎಂ:ಜೆಡಿ:ಜಿಪಿಆರ್.

## ಅರ್ಹ ಅಭ್ಯರ್ಥಿಗಳ ಮೂಲ ದಾಖಲೆ ಪರಿಶೀಲನೆ

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಮೀನುಗಾರಿಕೆ ಇಲಾಖೆಯಲ್ಲಿನ ಮೀನುಗಾರಿ ಸಹಾಯಕ ನಿರ್ದೇಶಕರು ಹುದ್ದೆಗಳಿಗೆ ಅರ್ಹರಾದ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ಮೇ 4 ರಂದು ಬೆಳಿಗ್ಗೆ 9.30 ಗಂಟೆಗೆ ಮತ್ತು ಮಧ್ಯಾಹ್ನ 2.00 ಗಂಟೆಗೆ ಆಯೋಗದ ಕಚೇರಿ, ಬೆಂಗಳೂರು ಇಲ್ಲಿ ನಡೆಯಲಿದೆ.

ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಆಯೋಗದ ವೆಬ್‍ಸೈಟ್ “http://kpsc.kar.nic.in” ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ಸೂಚನಾ ಪತ್ರಗಳನ್ನು ಆಯೋಗದ ಅಂತರ್ಜಾಲದಿಂದ ಏಪ್ರಿಲ್ 24 ರಿಂದ ಡೌನ್‍ಲೋಡ್ ಮಾಡಿಕೊಳ್ಳುವಂತೆಯು ಹಾಗೂ ಸೂಚನಾ ಪತ್ರವನ್ನು ಡೌನ್‍ಲೋಡ್ ಮಾಡಿಕೊಳ್ಳಲು ತಾಂತ್ರಿಕ ಸಮಸ್ಯೆಗಳು ಉಂಟಾದಲ್ಲಿ helpline ಸಂಖ್ಯೆ 7337830894

ಎಸ್‍ಎಂ:ಜೆಡಿ:ಜಿಪಿಆರ್.

## ಪ್ರಥಮ ಅಧಿವೇಶನ ಅಕೌಂಟ್ಸ್ ಹೈಯರ್ ಪರೀಕ್ಷೆ – ನಕಲು ಮಾಡಿದ ಅಭ್ಯರ್ಥಿಗಳ ಡಿಬಾರ್

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

2017 ನೇ ಸಾಲಿನ ಪ್ರಥಮ ಅಧಿವೇಶನದ ಅಕೌಂಟ್ಸ್ ಹೈಯರ್ ವಿಷಯದ ಪತ್ರಿಕೆ – 1 ರ ಇಲಾಖಾ ಪರೀಕ್ಷೆಯ ಸಮಯದಲ್ಲಿ ನಕಲು ಮಾಡುತ್ತಿದ್ದ ನೊಂದಣಿ ಸಂಖ್ಯೆಗಳಾದ 402254, 402755, 402763, 402274, 402518, 402081, 402089, 402366, 402635, 402606, 404233 ಹಾಗೂ 404250 ಪರೀಕ್ಷಾ ಅಭ್ಯರ್ಥಿಗಳನ್ನು ಮುಂದಿನ ವಿಚಾರಣಾ ನಡವಳಿಗಳನ್ನು ಬಾಕಿ ಇಟ್ಟಂತೆ ಪ್ರಸಕ್ತ ಅಧಿವೇಶನ ಮತ್ತು ಮುಂದೆ ನಡೆಯುವ 2017 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಯಿಂದ ಡಿಬಾರ್ ಮಾಡಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‍ಎಂ:ಜೆಡಿ:ಜಿಪಿಆರ್.

# ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 23-04-2017**ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ **ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ"** ಎಂಬ ಶೀರ್ಷಿಕೆಯಡಿ **ಶ್ರೀ.ಹನುಮಪ್ಪ ದಾಸರ** ಮತ್ತು ತಂಡ, **ಕೊಪ್ಪಳ ಜಿಲ್ಲೆ ರವರಿಂದ ಸುಗಮ ಸಂಗೀತ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

2) ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ **ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ"** ಎಂಬ ಶೀರ್ಷಿಕೆಯಡಿ ಶ್ರೀ. **ನಾಗರಾಜ್.ಕೆ ಮತ್ತು ತಂಡ, ದಕ್ಷಿಣ ಕನ್ನಡ ಜಿಲ್ಲೆ** ರವರಿಂದ **ಜಾನಪದ ಗೀತೆ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

3) ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

4) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:**

**I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಅರ್ಚನಾ ಪುನ್ಯೇಶ್ ಮತ್ತು ತಂಡದವರಿಂದ ಕುಚುಪುಡಿ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ ಶ್ರೀವಾಣಿ ವಿದ್ಯಾ ಕೇಂದ್ರ , ಬಸವೇಶ್ವರ ನಗರ , ಬೆಂಗಳೂರು ಶಾಲಾ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ**

- **ಬೆಳಿಗ್ಗೆ 7.00 ರಿಂದ ಬೆಳಿಗ್ಗೆ 10.00 ಘಂಟೆಯವರೆಗೆ Edilette Marketing And Consulting PVT.LTD,. ಬೆಂಗಳೂರು ರವರ ವತಿಯಿಂದ ಸಾರ್ವಜನಿಕರಿಗೆ ಯೋಗ ಮತ್ತು ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

# ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಏಪ್ರಿಲ್ 21 (ಕರ್ನಾಟಕ ವಾರ್ತೆ)

ಕರ್ನಾಟಕ ಲಲಿತಕಲಾ ಅಕಾಡೆಮಿಯು 2015, 2016 ಮತ್ತು 2017 ನೇ ಸಾಲಿನ ಪುಸ್ತಕ ಬಹುಮಾನ ಯೋಜನೆಯಡಿ ಪುಸ್ತಕ ಬಹುಮಾನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಪುಸ್ತಕಗಳು ಲಲಿತಕಲೆಗೆ ಸಂಬಂಧಪಟ್ಟ ಸಾಂಪ್ರದಾಯಿಕ, ಸಮಕಾಲೀನ ಇತ್ಯಾದಿ ಯಾವುದೇ ಪ್ರಕಾರದ ಲಲಿತೆಗೆ ಸಂಬಂಧಪಟ್ಟದ್ದಾಗಿರಬೇಕು ಹಾಗೂ ಮೊದಲ ಆವೃತ್ತಿಯಾಗಿರಬೇಕು. ಪುಸ್ತಕವು ಲೇಖಕರ ಸ್ವಂತ ರಚನೆಯಾಗಿರಬೇಕು.

2015ನೇ ಸಾಲಿನ ಬಹುಮಾನಕ್ಕೆ ಪುಸ್ತಕ 1 ನೇ ಜನವರಿ 2014 ರಿಂದ 31, ಡಿಸೆಂಬರ್ 2014 ಅವಧಿಯಲ್ಲಿ ಮುದ್ರಣಗೊಂಡಿರಬೇಕು. 2016ನೇ ಸಾಲಿನ ಬಹುಮಾನಕ್ಕೆ ಪುಸ್ತಕ 1 ನೇ ಜನವರಿ 2015 ರಿಂದ 31, ಡಿಸೆಂಬರ್ 2015 ಅವಧಿಯಲ್ಲಿ ಮುದ್ರಣಗೊಂಡಿರಬೇಕು. 2017ನೇ ಸಾಲಿನ ಬಹುಮಾನಕ್ಕೆ ಪುಸ್ತಕ 1 ನೇ ಜನವರಿ 2016 ರಿಂದ 31, ಡಿಸೆಂಬರ್ 2016 ಅವಧಿಯಲ್ಲಿ ಮುದ್ರಣಗೊಂಡಿರಬೇಕು.

ಪುಸ್ತಕ ಬಹುಮಾನಕ್ಕೆ ಅರ್ಜಿ ಸಲ್ಲಿಸುವ ಲೇಖಕರು ತಾವು ಕಳುಹಿಸುವ ಪುಸ್ತಕದ ನಾಲ್ಕು ಪ್ರತಿಗಳನ್ನು ಉಚಿತವಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಕಡ್ಡಾಯವಾಗಿ ನೀಡಬೇಕು. ಯಾವುದೇ ಕಾರಣಕ್ಕೂ ಈ ಪುಸ್ತಕಗಳನ್ನು ಹಿಂತಿರುಗಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, ಎರಡನೇ ಮಹಡಿ, ಚಾಲುಕ್ಯ ವಿಭಾಗ, ಜೆ.ಸಿ. ರಸ್ತೆ, ಬೆಂಗಳೂರು – 560 002 ಇವರನ್ನು ಸಂಪರ್ಕಿಬಹುದು ಅಥವಾ ಅಕಾಡೆಮಿ ವೆಬ್‌ಸೈಟ್ www.lalitkalakarnataka.org ಅನ್ನು ವೀಕ್ಷಿಸಬಹುದಾಗಿದೆ.

ಆಯ್ಕೆಯಾದ ಪುಸ್ತಕಗಳಿಗೆ ತಲಾ 25,000 ರೂ. ಬಹುಮಾನ ನೀಡಲಾಗುವುದು ಎಂದು ಲಲತಕಲಾ ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.